ಸುದ್ದಿ ಸಂಚಯ


ಕಾನ್ಪುರ


ಕಲ್ಯಾಣಿ

# ರಾಮಕೃಷ್ಣ ಮಹಾಸಂಘದ ಇತ್ತೀಚಿನ ಚಟುವಟಿಕೆಗಳು

**ಹೊಸ ಶಾಖಾಕೇಂದ್ರಗಳು ಮತ್ತು ಉಪಕೇಂದ್ರಗಳು :**

ತಿರುವಲ್ಲ ಕೇಂದ್ರದ ಉಪಕೇಂದ್ರವಾಗಿದ್ದ ರಾಮಕೃಷ್ಣ ಮಠ, **ಪತ್ತನಂತಿಟ್ಟ** ಕೇಂದ್ರವು ಈಗ ಪೂರ್ಣ ಪ್ರಮಾಣದ ಶಾಖಾಕೇಂದ್ರವಾಗಿ ಪರಿಗಣಿತವಾಗಿದೆ.

ಪಶ್ಚಿಮ ಬಂಗಾಳದ **ಸಾರಾತಿ**ಯಲ್ಲಿ ರಾಮಕೃಷ್ಣ ಮಿಷನ್ ಆರಂಭವಾಗಿದೆ. ಶ್ರೀರಾಮಕೃಷ್ಣರ ತಾಯಿ ಚಂದ್ರಮಣಿಯವರ ತಂದೆಯ ಮನೆಯನ್ನು ಸಾರಾತಿ ಗ್ರಾಮದಲ್ಲಿ ಗುರುತಿಸಲಾಗಿದ್ದು, ಅಲ್ಲಿ ಈಗಾಗಲೇ ಅಸ್ತಿತ್ವದಲ್ಲಿದ್ದ ರಾಮಕೃಷ್ಣ ಚಂದ್ರಮಣಿ ಸೇವಾಶ್ರಮವನ್ನು ರಾಮಕೃಷ್ಣ ಮಿಷನ್ ವಹಿಸಿಕೊಂಡಿದೆ.

ಕೇರಳದ ಆಲಪ್ಪುಳ ಜಿಲ್ಲೆಯ ಮಾವೇಲಿಕರ ಎಂಬಲ್ಲಿ ತಿರುವನಂತಪುರ ಕೇಂದ್ರದ ಉಪಕೇಂದ್ರವನ್ನು ಉದ್ಘಾಟಿಸಲಾಗಿದೆ.

**ಶಾಖಾಕೇಂದ್ರಗಳ ಕಾರ್ಯಚಟುವಟಿಕೆಗಳು : ಭಾರತದಲ್ಲಿ**

**ಸರೀಶ** ಕೇಂದ್ರದ ಬಾಲಕರ ಶಾಲೆಯು ತನ್ನ ಶತಮಾನೋತ್ಸವವನ್ನು (1923–2023) ಸೆಪ್ಟೆಂಬರ್ 29ರಿಂದ ಅಕ್ಟೋಬರ್ 3ರ ವರೆಗೆ ಆಚರಿಸಿತು.

**ನಾರಾಯಣಪುರ** ಕೇಂದ್ರವು ಅಕ್ಟೋಬರ್ ತಿಂಗಳಲ್ಲಿ ಇನ್ನೊಂದು ಸಂಸ್ಥೆಯ ಸಹಯೋಗದೊಂದಿಗೆ ಕ್ರೀಡಾಕೂಟವನ್ನು ನಡೆಸಿತು.

**ಆಲ್ಮೋರ** ಕೇಂದ್ರದಲ್ಲಿ ನವೆಂಬರ್ 3ರಂದು ಉಪಾಧ್ಯಕ್ಷರಾದ ಶ್ರೀಮತ್ ಸ್ವಾಮಿ ಸುಹಿತಾನಂದಜಿಯವರು ನವೀಕರಿಸಿದ 'ರಾಮ್ ಮಹಾರಾಜ್ ಸ್ಮೃತಿಭವನ'ವನ್ನು ಲೋಕಾರ್ಪಣೆ ಮಾಡಿದರು. ಇದಲ್ಲದೆ ಅವರು, 1) ಆಲ್ಮೋರಾದಲ್ಲಿರುವ 200 ವರ್ಷ ಹಳೆಯ 'ತುರೀಯಾನಂದ ತಪೋಸ್ಥಲಿ'ಯ ನವೀಕೃತ ಕಟ್ಟಡವನ್ನು ಉದ್ಘಾಟನೆ ಮಾಡಿದರು. ಇದು ಸ್ವಾಮಿ ತುರೀಯಾನಂದ ಹಾಗೂ ಸ್ವಾಮಿ ಶಿವಾನಂದರ ದಿವ್ಯ ಸ್ಮೃತಿಗಳಿಂದ ಪುನೀತವಾದ ಸ್ಥಳವಾಗಿದೆ. 2) ಕಾಕ್ರಿಘಾಟ್‌ನಲ್ಲಿ ಸ್ವಾಮಿ ವಿವೇಕಾನಂದರ ಮೂರ್ತಿಯನ್ನು ಅನಾವರಣಗೊಳಿಸಿ ಉದ್ಘಾಟಿಸಿದರು. ಈ ಸ್ಥಳದಲ್ಲಿ ಸ್ವಾಮಿ ವಿವೇಕಾನಂದರಿಗೆ ವ್ಯಷ್ಟಿ-ಸಮಷ್ಟಿ ಜಗತ್ತುಗಳ ನಡುವಿನ ಏಕತೆಯ ಅಸಾಧಾರಣ ಅನುಭವವಾಗಿತ್ತು .

ಉತ್ತರಾಖಂಡದ **ಜೌಲಂಗಿ**ಯಲ್ಲಿ **ಗುರುಗ್ರಾಮ** ಕೇಂದ್ರದ ಸಾಧನ ಕೇಂದ್ರವಿದ್ದು, ಅಲ್ಲಿ ವಿಚಾರ ಸಂಕಿರಣ ಭವನವನ್ನು ಸ್ವಾಮಿ ಸುಹಿತಾನಂದಜಿಯವರು ಉದ್ಘಾಟಿಸಿದರು.


ಆಲ್ಮೋರಾ


ದಕ್ಷಿಣೇಶ್ವರ



ವೃಂದಾವನ



ಝಾರ್‌ಗ್ರಾಮ

**ಜಯರಾಮಬಾಟಿ**ಯಲ್ಲಿ ಮಹಾಸಂಘದ ಪರಮಾಧ್ಯಕ್ಷರಾದ ಶ್ರೀಮತ್ ಸ್ವಾಮಿ ಗೌತಮಾನಂದಜಿಯವರು, 1) ನವೆಂಬರ್ 10ರಂದು ಪುಸ್ತಕ ಮಳಿಗೆ ಹಾಗೂ ಪಲ್ಲಿಮಂಗಲ್ ಮಾರಾಟ ಮಳಿಗೆಯನ್ನು ಉದ್ಘಾಟಿಸಿದರು; 2) ನವೆಂಬರ್ 12ರಂದು ಬಾಲಕರ ಪ್ರೌಢಶಾಲೆಯಲ್ಲಿ ಪ್ರಾರ್ಥನಾ ಮಂದಿರವನ್ನು ಉದ್ಘಾಟಿಸಿದರು.

ಸ್ವಾಮಿ ಗೌತಮಾನಂದಜಿಯವರು **ದಕ್ಷಿಣೇಶ್ವರ** ಕೇಂದ್ರದಲ್ಲಿ ಸ್ವಾಮಿ ವಿಜ್ಞಾನಾನಂದರ ಜಯಂತಿಯ ದಿನವಾದ ನವೆಂಬರ್ 14ರಂದು ಕಂಪ್ಯೂಟರ್ ಕೇಂದ್ರವನ್ನು ಕೂಡ ಉದ್ಘಾಟಿಸಿದರು.

**ಕಾನ್ಪುರ** ಆಶ್ರಮವು ನವೆಂಬರ್ 14ರಂದು ವಿಶೇಷ ಪೂಜೆ, ಭಜನೆ ಹಾಗೂ ಸಾರ್ವಜನಿಕ ಸಭೆಗಳೊಂದಿಗೆ ವರ್ಷಪೂರ್ತಿ ಆಚರಿಸುವ ಶತಮಾನೋತ್ಸವಕ್ಕೆ ಚಾಲನೆಯನ್ನು ನೀಡಿತು.

ನವೆಂಬರ್ 17ರಂದು **ಪುರುಲಿಯಾ** ಕೇಂದ್ರದಲ್ಲಿ ನವೀಕೃತೆಯ ಅಡುಗೆ ಶಾಲೆಯನ್ನು ಉದ್ಘಾಟಿಸಲಾಯಿತು.

**ಪೊನ್ನಂಪೇಟೆ**ಯ ಆರೋಗ್ಯಧಾಮದ ಆವರಣದಲ್ಲಿ ಫಾರ್ಮಸಿ, ಪ್ಯಾಥೋಲಜಿ ಲ್ಯಾಬ್, ಡೆಂಟಲ್ ಕ್ಲಿನಿಕ್ ಹಾಗೂ ಪುಸ್ತಕ ಮಳಿಗೆ ಇವುಗಳನ್ನು ಒಳಗೊಂಡ ಹೊಸ ಕಟ್ಟಡವನ್ನು ಉದ್ಘಾಟಿಸಲಾಯಿತು.

**ವೃಂದಾವನ** ಕೇಂದ್ರದಲ್ಲಿ ಪ್ರೇಮಾನಂದ ಭವನದ (ಅತಿಥಿ ಗೃಹ) ಎರಡನೇ ಅಂತಸ್ತು ಹಾಗೂ ಹೊರರೋಗಿ ವಿಭಾಗದ (OPD) ರಿಜಿಸ್ಟ್ರೇಶನ್ ಹಾಲ್ ಇವುಗಳು ನವೆಂಬರ್ 19ರಂದು ಸ್ವಾಮಿ ಸುಹಿತಾನಂದಜಿಯವರಿಂದ ಉದ್ಘಾಟಿಸಲ್ಪಟ್ಟವು.

**ಕಲ್ಯಾಣಿ** ಕೇಂದ್ರದಲ್ಲಿ ನವೆಂಬರ್ 25ರಂದು ಪರಮಾಧ್ಯಕ್ಷರಾದ ಸ್ವಾಮಿ ಗೌತಮಾನಂದಜಿಯವರು ಆಸ್ಪತ್ರೆಯ ಎರಡನೇ ಅಂತಸ್ತಿನ ಅನೆಕ್ಸ್ ಕಟ್ಟಡವನ್ನು ಉದ್ಘಾಟಿಸಿದರು.

ಅರುಣಾಚಲ ಪ್ರದೇಶದ **ಆಲೋ** ಕೇಂದ್ರದಲ್ಲಿ ಆಫೀಸು ಹಾಗೂ ಸಾಧುನಿವಾಸಗಳಿರುವ ಹೊಸ ಕಟ್ಟಡವನ್ನು ಪರಮಾಧ್ಯಕ್ಷ ಮಹಾರಾಜರು ನವೆಂಬರ್ 26ರಂದು ವರ್ಚುಅಲ್ ಆಗಿ ಉದ್ಘಾಟಿಸಿದರು.

**ಸರ್ಗಾಚಿ** ಆಶ್ರಮದ ಧ್ಯಾನಗಂಗಾ ಕೃಷಿ ವಿಜ್ಞಾನ ಕೇಂದ್ರವು (KVK) ಮಾಧ್ಯಮ ಸಂಸ್ಥೆಯಾದ ಔಟ್‌ಲುಕ್ ಗ್ರೂಪ್‌ನಿಂದ ರಾಷ್ಟ್ರೀಯ ಮಟ್ಟದ ಕೆ.ವಿ.ಕೆ. ಪ್ರಶಸ್ತಿಯನ್ನು ಪಡೆದಿದೆ. ಸೆಪ್ಟೆಂಬರ್ 9ರಂದು ದೆಹಲಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಕೇಂದ್ರ ಕೃಷಿ ಮತ್ತು ಕಲ್ಯಾಣ ಸಚಿವರಾದ ಶಿವರಾಜ್ ಸಿಂಗ್ ಚೌಹಾಣ್ ಅವರು ಆಶ್ರಮಕ್ಕೆ ಪ್ರಶಸ್ತಿಪತ್ರವನ್ನು ನೀಡಿದರು.

**ಝಾರ್‌ಗ್ರಾಮ** ಕೇಂದ್ರದ ಶಾಲೆಗೆ ನವೆಂಬರ್ 26ರಂದು ಕೋಲ್ಕತ್ತದಲ್ಲಿ ನಡೆದ ರಾಜ್ಯಮಟ್ಟದ ಏಕಲವ್ಯ ಮೋಡೆಲ್ ರೆಸಿಡೆನ್ಷಿಯಲ್ ಸ್ಕೂಲ್ (Inter-EMRS) ಕ್ರೀಡಾಕೂಟದಲ್ಲಿ 19 ಚಿನ್ನ, 7 ಬೆಳ್ಳಿ ಹಾಗೂ 8 ಕಂಚಿನ ಪದಕಗಳು ಹಾಗೂ ಚಾಂಪಿಯನ್‌ಶಿಪ್ ದೊರೆತಿವೆ.



ಪೊನ್ನಂಪೇಟೆ



ರಾಯಪುರ

Managing Editor : Swami Muktidananda
Editor : Swami Jnanayogananda
Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020